ನಿರಾಕರಿಸುತ್ತ, ನೇರವಾಗಿ ನಮ್ಮ ಜೊತೆಯೇ ಮಾತಾಡುತ್ತದೆ. ಅದು ಬಾಹ್ಯ ಜಗತ್ತನ್ನು ಹೇಗೆ ಪ್ರತಿನಿಧಿಸುವುದಿಲ್ಲವೋ ಹಾಗೆ ಬಾಹ್ಯ ಜಗತ್ತನ್ನು ಕುರಿತ ಹೇಳಿಕೆಗಳನ್ನೂ ನೀಡುವುದಿಲ್ಲ. ಅದು ಚಿತ್ರಕಲೆಯನ್ನು ದೂರವಿಡುವಂತೆ ಭಾಷೆಯನ್ನೂ ದೂರವಿಡುತ್ತದೆ. ನಾವೊಂದು ಚಿತ್ರವನ್ನು ನೋಡುವಾಗ ಬಾಹ್ಯ ಜಗತ್ತಿನಲ್ಲಿ ಆ ಚಿತ್ರದ ಅಸ್ತಿತ್ವವಿದೆಯೆಂಬ ವಾಸ್ತವವೇ ನಮ್ಮ ಹಾಗೂ ಕಲಾವಿದ ಅಭಿವ್ಯಕ್ತಗೊಳಿಸುತ್ತಿರುವ ವಿಚಾರದ ನಡುವೆ ಒಂದು ಮಧ್ಯವರ್ತಿಯಾಗಿ ಕೆಲಸಮಾಡುತ್ತದೆಯಷ್ಟೆ. ಒಂದು ಕವಿತೆಯನ್ನು ಓದುವಾಗ ಕೂಡ ಆ ಕವನದ ಶಬ್ದಗಳು ಅದೇ ರೀತಿ ಕೆಲಸಮಾಡುತ್ತವೆ. ಆದರೆ ಸಂಗೀತ ಹಾಗಲ್ಲ.

ಸಂಗೀತಕ್ಕೆ ವಾಸ್ತುಶಿಲ್ಪದ, ಪೇಂಟಿಂಗಿನ, ಶಿಲ್ಪಕಲೆಯ, ನೃತ್ಯದಲ್ಲಿ ಕಣ್ಣಿಗೆ ಕಾಣುವ ಚಲನೆಯ ಹೋಲಿಕೆಯಿದ್ದರೂ ಅದು ಅದಾವುದೂ ಅಲ್ಲ. ಸಂಗೀತವನ್ನು ವಿವರಿಸುವುದಕ್ಕಾಗಿ ಈ ಕಲೆಗಳ ಪರಿಭಾಷೆಯನ್ನು ಯಾಕೆ ಉಪಯೋಗಿಸಲಾಗುತ್ತದೆಯೆಂದರೆ ಹೆಚ್ಚು ಮೂರ್ತವಾದ ವಸ್ತುಗಳನ್ನು ಒಳಗೊಳ್ಳುವ ಈ ಪರಿಭಾಷೆಯ ಪ್ರತಿಮೆಗಳು ಸುಲಭವಾಗಿ ಅರ್ಥವಾಗುತ್ತವೆಯೆಂಬ ಕಾರಣಕ್ಕಾಗಿ. ಸಂಗೀತವು ಶಬ್ದಗಳನ್ನು ಉಪಯೋಗಿಸುವ ಮೂಲಕ ಒಂದು ಕತೆಯನ್ನೇನಾದರೂ ಹೇಳಿದರೆ ಅದು ಶಬ್ದಗಳೂ ಆಗಿರುವುದಿಲ್ಲ, ಕತೆಯೂ ಆಗಿರುವುದಿಲ್ಲ. ಒಟ್ಟಿನಲ್ಲಿ ಅದು ಸಂಗೀತ ಬಿಟ್ಟು ಬೇರೇನೂ ಆಗಿರುವುದಿಲ್ಲ.

ಭಾರತೀಯ ಸಂಗೀತದಲ್ಲಿ ಕೆಲವು ರಾಗಗಳನ್ನು ಚಿತ್ರಿಸುವ ಪೇಂಟಿಂಗುಗಳಿವೆ. ಹಾಗೆ ನೋಡಿದರೆ, ಮಿನಿಯೇಚರ್ ಚಿತ್ರಗಳ ಪ್ರತಿಯೊಂದು ಶೈಲಿಯಲ್ಲಿಯೂ ರಾಗಮಾಲಾ ಚಿತ್ರಗಳುಂಟು. ಹೇಗೆಂದರೆ ತೋಡಿ ರಾಗವನ್ನು ಚಿತ್ರಿಸುವ ಮೊಘಲ್ ಶೈಲಿಯ ಪೇಂಟಿಂಗ್ ಇರುವಂತೆ ಅದೇ ರಾಗವನ್ನು ಚಿತ್ರಿಸುವ ಪಹಾಡಿ ಶೈಲಿಯ ಪೇಂಟಿಂಗೂ ಇದೆ. ಅಂಥ ಪೇಂಟಿಂಗುಗಳಲ್ಲಿ ಜಿಂಕೆ, ಆನೆಗಳಂಥ ಪ್ರಾಣಿಗಳು ವಸ್ತುಪ್ರತಿರೂಪಗಳಾಗಿ ಕೆಲಸಮಾಡುತ್ತ ರಾಗಾನುಭವವು ಇಂದ್ರಿಯಗಮ್ಯವಾಗುವಂತೆ ಮಾಡುತ್ತವೆ.

ನಮ್ಮ ಸಂಗೀತದಲ್ಲಿ ಸುಸ್ವರ ಮತ್ತು ತಾಳ ಪರಸ್ಪರ ಸಮಾನಾಂತರವಾಗಿ ಸಾಗುತ್ತವೆಯಲ್ಲವೆ? ಸುಸ್ವರದ ಅಥವಾ ಮೆಲಡಿಯ ತೀರ ನಯವಾದ ನೇಯ್ಗೆಯಿದೆಯಲ್ಲ, ಅದನ್ನು ಕೆಲವು ಸಂದರ್ಭಗಳಲ್ಲಿ ಮಾತ್ರ ನಾವು ಗ್ರಹಿಸಬಹುದು. ಅದು ಕ್ಷಣಮಾತ್ರ ಜ್ವಲಿಸಿ ಮಾಯವಾಗುವ ಮಿಂಚಿನಂತೆ. ಕಾಲದಲ್ಲಿ ಮಾತ್ರ ರೂಪುಗೊಳ್ಳುವ ಈ ಮೆಲಡಿಯ ವಿನ್ಯಾಸವನ್ನು ರಾಗಮಾಲಾ ಚಿತ್ರಗಳು ಸೆರೆಹಿಡಿಯುತ್ತವೆ ಎನ್ನಬೇಕು.

ರಾಗಮಾಲಾ ಚಿತ್ರಗಳಲ್ಲಿ ಕೆಲವು ಪ್ರತೀಕಗಳು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ. ಉದಾಹರಣೆಗೆ ಹಿಂದೋಳ ರಾಗವನ್ನು ಪ್ರತಿನಿಧಿಸುವ ಪೇಂಟಿಂಗಿನಲ್ಲಿ ಉಯ್ಯಾಲೆಯಲ್ಲಿ ಕುಳಿತಿರುವ ಹೆಣ್ಣು ಜಾರು ಸ್ವರಗಳು ಉಂಟುಮಾಡುವ ಮಧುರ ಭಾವವನ್ನು ಹೊಮ್ಮಿಸುವಂತಿದ್ದಾಳೆ. ಅದೇ ರೀತಿ ಮಲ್ಹಾರ್ ಮತ್ತು ಸಾರಂಗ್ ರಾಗಗಳನ್ನು ಪ್ರತಿನಿಧಿಸುವ ಪೇಂಟಿಂಗುಗಳಲ್ಲಿ ವರ್ಷಧಾರೆಯ ಚಿತ್ರವಿದೆ. ಮತ್ತೆ ಈ ರಾಗಗಳಿಗೂ ಮಳೆಗಾಲಕ್ಕೂ ವಿಚಿತ್ರ ನಂಟು.

ಸಂಗೀತ ವಿಮರ್ಶಕ ಚೇತನ್ ಕರ್ನಾನಿಯವರ ಪ್ರಕಾರ ಹಿಂದುಸ್ತಾನಿ ಸಂಗೀತದಲ್ಲಿ ಇವೆಯೆಂದು ಹೇಳಲಾಗುವ ಕೋಕಲಿ, ದೇಸ ಬರಾತಿ, ಸಾವಿರಿ, ಪುಹೂಪ, ಮಾಲವ ಗೌಡಿ ಮುಂತಾದ ಕೆಲವು ರಾಗಗಳು ಪೇಂಟಿಂಗುಗಳಲ್ಲಿ ಮಾತ್ರ ಅಸ್ತಿತ್ವದಲ್ಲಿವೆ. ನನಗೆ ತಿಳಿದಮಟ್ಟಿಗೆ ಈಗ ಅವುಗಳನ್ನು ಹಾಡುವವರು ಯಾರೂ ಇಲ್ಲ. ಆದರೂ ಆ ರಾಗಗಳನ್ನು ಆಧರಿಸಿದ ಪೇಂಟಿಂಗುಗಳಿವೆಯಲ್ಲ, ಅವು ಪ್ರೇಮ, ವಿರಹಗಳಂಥ ಹೃದಯವಿದ್ರಾವಕ ಭಾವನೆಗಳನ್ನು ಚಿತ್ರಿಸುತ್ತವೆ.

ನಮ್ಮಲ್ಲಿ ಸಂಗೀತಗಾರರೇ ನಾಯಕ ಪಾತ್ರದಲ್ಲಿರುವ ಕೆಲವು ಕಾದಂಬರಿಗಳಿವೆಯಷ್ಟೆ.